**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:79, ಸರ್ವಜ್ಞನಗರ**
**ವಾರ್ಡ್ ಸಮಿತಿ ಸಭೆ, ದಿನಾಂಕ:11-11-2020ರ ಸಭಾ ನಡವಳಿಗಳು**

ದಿನಾಂಕ:11-11-2020 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್-79 ಸರ್ವಜ್ಞನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಂ.ಎಂ.ರಸ್ತೆಯಲ್ಲಿರುವ ಪಾಲಿಕೆಯ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು**

1) ಶ್ರೀ.ಅಶ್ವಿನ್‌ಕುಮಾರ್.ಎಂ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
2) ಶ್ರೀ.ಕೆ.ಸಿ.ಸೂರ್ಯನಾರಾಯಣ, ಕಿರಿಯ ಆರೋಗ್ಯ ಪರಿವೀಕ್ಷಕರು
3) ಶ್ರೀ.ಸೋಮಶೇಖರ್ ರೆಡ್ಡಿ. ಕಿರಿಯ ಅಭಿಯಂತರರು ಬೆಸ್ಕಾಂ
4) ಶ್ರೀ.ಲೋಹಿತ್.ಕೆ.ಪ್ರಕಾಶ್ ಕಿರಿಯ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ(ಜೆಬಿಎನ್)
5) ಶ್ರೀ. ಡಾ|| ಸಾಲೋಮೋನ್ ಜೋಸೆಫ್ ವೈಧ್ಯಾಧಿಕಾರಿಗಳು,
6) ಶ್ರೀ.ವಿ.ಕೃಷ್ಣಪ್ಪ, ಕಂದಾಯ ಅಧಿಕಾರಿ,
7) ಶ್ರೀ.ಮುನಿ ಯೆಲ್ಲಪ್ಪ, ಕಂದಾಯ ಪರಿವೀಕ್ಷಕರು
8) ಶ್ರೀಮತಿ.ಯಶೋಧ, ಸಹಾಯಕ ನರ್ಸ್
9) ಶ್ರೀ.ಕೆ.ರಾಮಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
10) ಶ್ರೀ.ಜಿ.ರಾಮು. ಮಾರ್ಷಲ್
11) ಶ್ರೀ.ರಾವ್‌ಗಣೇಶ್, ಆರಕ್ಷಕ ನಿರೀಕ್ಷಕರು
12) ಶ್ರೀ.ಧರ್ಮರಾವ್, ಎ.ಎಸ್.ಐ(ಕಾ&ಸು)

ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಎಲ್ಲಾ ಅಧಿಕಾರಿ/ನೌಕರರುಗಳು ಮತ್ತು ಕಮಿಟಿಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವುದಕ್ಕೆ ಸ್ವಾಗತ ಕೋರಿದರು.

ನಂತರ ವಾರ್ಡ್ ಕಮಿಟಿಯ ಅಧ್ಯಕ್ಷರು ಕರ್ನಾಟಕ ಮುನಿಸಿಪಲ್ ಕಾರ್ಪೋರೇಶನ್ ಕಾಯ್ದೆ 1976ರ ಕಲಂ 13(H) ಅಡಿ ವಾರ್ಡ್ ಸಮಿತಿಗಳನ್ನು ರಚಿಸಿ, ಚುನಾಯಿತ ವಾರ್ಡ್ ಸದಸ್ಯರು ಕರ್ನಾಟಕ ಮುನಿಸಿಪಲ್ ಕಾರ್ಪೋರೇಶನ್ ಕಾಯ್ದೆ 1976ರ ನಿಯಮ 70 ರಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಸದರಿ ಚುನಾಯಿತ ಪ್ರತಿನಿಧಿಗಳ ಅಧಿಕಾರ ಅವಧಿಯು ದಿನಾಂಕ:10-09-2020 ಕ್ಕೆ ಮುಕ್ತಾಯವಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಮಾನ್ಯ ಆಯುಕ್ತರು, ಬಿಬಿಎಂಪಿ ರವರು ಕಛೇರಿ ಆದೇಶ ಸಂಖ್ಯೆ:ಬಿ12(5)/ಪಿಆರ್/35/2020-21, ದಿನಾಂಕ:21-09-2020 ರಂತೆ ವಾರ್ಡಗಳಿಗೆ ನೋಡೆಲ್ ಅಧಿಕಾರಿ ರವರನ್ನು ನೇಮಿಸಿರುತ್ತಾರೆ. ಅದರಂತೆ, ವಾರ್ಡ್ ಸಂಖ್ಯೆ: 79-ಸರ್ವಜ್ಞನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸದಸ್ಯರನ್ನು ಗುರುತಿಸಿ, ವಾರ್ಡ್ ಸಮಿತಿಯನ್ನು ರಚಿಸಲು ಕರ್ನಾಟಕ ಮುನಿಸಿಪಲ್ ಕಾರ್ಪೋರೇಶನ್ ಕಾಯ್ದೆ 1976ರ ಕಲಂ 13(H) ಅಡಿಯಲ್ಲಿ ಸೂಚಿಸಿರುವಂತೆ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ 10 ಜನ ಸದಸ್ಯರೊಳಗೊಂಡ ಸಮಿತಿಯನ್ನು ರಚಿಸಬೇಕಾಗಿದ್ದು, ಮುಂದಿನ ದಿನಗಳಲ್ಲಿ ರಚಿಸಲಾಗುತ್ತದೆ ಎಂದು ಸಭೆಯಲ್ಲಿ ನೋಡೆಲ್ ಅಧಿಕಾರಿಗಳು ತಿಳಿಸಿದರು.

ವಾರ್ಡ್ ಸಮಿತಿಯು ಪ್ರತಿ ಮಾಹೆಯ 1ನೇ ಹಾಗೂ 3ನೇ ಶನಿವಾರದಂದು ಅಥವಾ ಆ ದಿನದಲ್ಲಿ ಸಾರ್ವಜನಿಕ ರಜೆ ಇದ್ದರೆ ಅದರ ಮುಂದಿನ ದಿನಾಂಕದಂದು ಸಭೆ ನಡೆಸಲಾಗುವುದೆಂದು ಹಾಗೂ ಸಭೆಯ ದಿನಾಂಕವನ್ನು ಮುಂಚಿತವಾಗಿ ತಿಳಿಸಲಾಗುವುದೆಂದು ಸಭೆಗೆ ತಿಳಿಸಿ, ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

Scanned with CamScanner

ಸಭೆಯಲ್ಲಿ ಚರ್ಚಿಸುವ ವಿಷಯಗಳು:-

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| I | **BBMP** | |
| | **ಘನತ್ಯಾಜ್ಯ ನಿರ್ವಹಣೆ (SWM)** | |
| 1 | ಕಸ ಸಂಗ್ರಹಣೆ ವಾಹನಗಳಿಗೆ ಮೈಕ್‌ನ್ನು ಅಳವಡಿಸಲು ಸೂಚಿಸಲಾಯಿತು. | Junior Health Inspector |
| 2 | ವಾರ್ಡ್ ವ್ಯಾಪ್ತಿಯಲ್ಲಿ ಉಂಟಾಗಿರುವ ಎಲ್ಲಾ ಕಸದ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಸಿಲು ಸೂಚಿಸಲಾಯಿತು. | |
| 3 | ಪೌರಕಾರ್ಮಿಕರಿಗೆ ಮಸ್ಟರಿಂಗ್ ಕಟ್ಟಡ ನಿರ್ಮಿಸಲು ತಮ್ಮ ವಿಭಾಗದಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಲು ಸೂಚಿಸಲಾಯಿತು. | |
| | **ಕಾಮಗಾರಿ ಇಲಾಖೆ (Engineering)** | |
| 1 | ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. | Assistant Engineer-BBMP |
| 2 | ಕಾಕ್ಸ್‌ಟೌನ್‌ನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೀರಿನ ಸಮಸ್ಯೆ ಇದ್ದು, ಕೂಡಲೇ ಅದನ್ನು ಪರಿಹರಿಸಲು ತಿಳಸಿದರು. | |
| 3 | ಕಾಕ್ಸ್‌ಟೌನ್‌ನಲ್ಲಿರುವ ಪಾಲಿಕೆಯ ಮಾರ್ಕೆಟ್ ಕಟ್ಟಡದ ಕಾಮಗಾರಿಯ ಬಗ್ಗೆ ಮಾಹಿತಿಯನ್ನು ಕೇಳಿದರು. | |
| 4 | ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಕ್ಯಾಮೆರಾಗಳನ್ನು ಅಳವಡಿಸುವ ಕಾಮಗಾರಿಯ ಮಾಹಿತಿಯನ್ನು ಕೋರಲಾಯಿತು. | |
| 5 | ಕದಿರಯ್ಯನಪಾಳ್ಯದಲ್ಲಿ ಬಿ.ಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ರಸ್ತೆಯನ್ನು ಅಗೆದಿರುವುದರಿಂದ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿರುವುದನ್ನು ಸರಿಪಡಿಸಲು ಸಭೆಯಲ್ಲಿ ಸ್ಥಳೀಯ ನಿವಾಸಿಗಳು ಕೋರಿದರು, ಅದಕ್ಕೆ ವಾರ್ಡ್‌ನ ಸಹಾಯಕ ಅಭಿಯಂತರರು ಪ್ರತಿಕ್ರಿಯಿಸಿ ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಲಾಗಿದ್ದು, ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯ ಹಂತದಲ್ಲಿದ್ದು ಟೆಂಡರ್ ಪ್ರಕ್ರಿಯೆ ನಂತರ ಕಾಮಗಾರಿಯನ್ನು ಪ್ರಾರಂಭಗೊಳಸಲಾಗುವುದು ಎಂದು ತಿಳಸಿದರು. | |
| | **ಕಂದಾಯ ಇಲಾಖೆ(Revenue Department)** | |
| 1 | 2016 ರಿಂದ 2019 ರವರೆಗೆ ಕಂದಾಯ ಇಲಾಖೆಯ ವಾರ್ಡ್ ವ್ಯಾಪ್ತಿಯಲ್ಲಿ ವಸೂಲಾಗಿರುವ ತೆರಿಗೆ ಮೊತ್ತ, ಬಾಕಿರುವ ಮೊತ್ತದ ವಿವರಗಳನ್ನು ಸಭೆಯಲ್ಲಿ ಕೋರಿದರು. ಹೊಸದಾಗಿ ಸೇರ್ಪಡೆಯಾಗಿರುವ ಮನೆಗಳ ಕಂದಾಯ ವಸೂಲಾತಿಗಳ ವಿವರ ಮತ್ತು ಖಾತಾ ಪ್ರಮಾಣ ಪತ್ರಗಳು ದೃಢೀಕರಿಸಿ ನೀಡಿರುವ ಬಗ್ಗೆ ಮಾಹಿತಿಯನ್ನು ಸಭೆಯಲ್ಲಿ ನೀಡಲು ತಿಳಸಲಾಯಿತು. | ಕಂದಾಯ ಅಧಿಕಾರಿಗಳು |
| 2 | ಘನತ್ಯಾಜ್ಯ ನಿರ್ವಹಣೆಯ ವಿಭಾಗ ಸಿಬ್ಬಂಧಿ/ಕಿರಿಯ ಆರೋಗ್ಯ ಪರಿವೀಕ್ಷಕರ ಜೊತೆ ಜಂಟಿಯಾಗಿ ಖಾಲಿ ನಿವೇಶನಗಳನ್ನು ಪರಿಶೀಲಿಸಿ, ಮಸ್ಟರಿಂಗ್ ಸೆಂಟರ್ ನಿರ್ಮಿಸಲು ಸೂಕ್ತ ಸ್ಥಳವನ್ನು ನಿಗಧಿಪಡಿಸಲು ಸಭೆಯಲ್ಲಿ ಸೂಚಿಸಲಾಯಿತು. | ಕಂದಾಯ ಅಧಿಕಾರಿಗಳು |
| 3 | ಕಾಕ್ಸ್‌ಟೌನ್‌ನಲ್ಲಿರುವ ಮಾರುಕಟ್ಟೆ ಕಟ್ಟಡವನ್ನು ಹಸ್ತಾಂತರಿಸುವ ಬಗ್ಗೆ ಸಹ ಕಂದಾಯ ಅಧಿಕಾರಿಗಳು, ಮಾರುಕಟ್ಟೆ ರವರು ಕೂಡಲೇ ಕ್ರಮ ವಹಿಸಬೇಕೆಂದು ಸಭೆಯಲ್ಲಿ ಕೋರಿದರು. | ಸಹ ಕಂದಾಯ ಅಧಿಕಾರಿಗಳು(ಮಾರುಕಟ್ಟೆ) |
| | **BWSSB** | |
| 1 | ಪಿ.ಎಸ್.ಕೆ.ನಾಯ್ಡು ರಸ್ತೆಯಲ್ಲಿರುವ ಕೆ.ಹೆಚ್.ಬಿ ಕ್ವಾಟ್ರೆಸ್ ಮತ್ತು ಯೆಲ್ಲಪ್ಪ ಗಾರ್ಡನ್‌ಗಳಲ್ಲಿ ಒಳಚರಂಡಿಯ ಮ್ಯಾನ್‌ಹೋಲ್‌ಗಳನ್ನು ನಿಯಮಿತವಾಗಿ ಸ್ವಚ್ಚಗೊಳಸದ ಕಾರಣ ತುಂಬಿ ರಸ್ತೆಯಲ್ಲಿ ಹರಿಯುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು. | Assistant Engineer-BWSSB |

Scanned with CamScanner

| | | |
|---|---|---|
| **BESCOM** | | |
| 1 | ಕದಿರಯ್ಯನಪಾಳ್ಯದಲ್ಲಿರುವ ಪಾಲಿಕೆ ವಸತಿ ಗೃಹಗಳ ಸಮೀಪದಲ್ಲಿ ವಿದ್ಯುತ್ ಕಂಬಗಳು ವಾಲಿದ್ದು, ಇದನ್ನು ಸರಿಪಡಿಸಲು ಕೋರಲಾಯಿತು. | Assistant Engineer-BESCOM |
| **ಬೃಹತ್ ನೀರುಗಾಲುವೆ (SWD)** | | |
| 1 | ಪಿ.ಎಸ್.ಕೆ.ನಾಯ್ಡು ರಸ್ತೆಯಲ್ಲಿರುವ ಕೆ.ಹೆಚ್.ಬಿ ಕ್ವಾಟ್ರೆಸ್ ಹಿಂಭಾಗದಲ್ಲಿರುವ ಬೃಹತ್ ನೀರುಗಾಲುವೆಯ ತಡೆ ಗೋಡೆಯು ಹಾಳಾಗಿದ್ದು, ಬೀಳುವ ಹಂತದಲ್ಲಿರುತ್ತದೆ, ಇದನ್ನು ದುರಸ್ಥಿ ಮಾಡಿ, ಚೈನ್‌ಲಿಂಕ್ ಫೆನ್ಸಿಂಕ್ ಅಳವಡಿಸಲು ಕೋರಿದರು. | Assistant Engineer-SWD |
| **ತೋಟಗಾರಿಕಾ ಇಲಾಖೆ (Horticulture Department)** | | |
| 1 | ವಾರ್ಡ್ ವ್ಯಾಪ್ತಿಯಲ್ಲಿರುವ ಉದ್ಯಾನವನಗಳ ಸ್ವಚ್ಛಗೊಳಸಲು ಸೂಚಿಸಲಾಯಿತು. | Horticulture inspector |
| **ಪಶುಸಂಗೋಪನಾ ಇಲಾಖೆ (Animal & Husbandary)** | | |
| 1 | ಕಾಕ್ಸ್‌ಟೌನ್‌ನ ಎಂ.ಎಂ.ರಸ್ತೆಯ ಬದಿಯಲ್ಲಿ ಸರ್ಕಾರಿ ಆಸ್ಪತ್ರೆಯ ಮುಂಭಾಗದಲ್ಲಿರುವ ವ್ಯಾಪಾರಿ ಮಳಿಗೆಗಳಲ್ಲಿ ನಡೆಸುತ್ತಿರುವ ಮಾಂಸದ ಅಂಗಡಿ ಹಾಗೂ ಮತ್ತು ಇತರೆ ಅಂಗಡಿಗಳನ್ನು ಪಾಲಿಕೆ ವತಿಯಿಂದ ಹೊಸದಾಗಿ ನಿರ್ಮಿಸಿರುವ ಮಾರುಕಟ್ಟೆ ಮಳಿಗೆಗಳಗೆ ಸ್ಥಳಾಂತರಿಸಬೇಕಾಗಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ಸಭೆಯಲ್ಲಿ ನಿವಾಸಿಗಳು ಕೋರಿದರು. ಹಾಗೂ ಸದರಿ ಮಾಂಸದ ಅಂಗಡಿಗಳಗೆ ನೀಡಿರುವ ಪರವಾನಿಗೆ ಪತ್ರ (Trade license) ನೀಡಿರುವ ಬಗ್ಗೆ ವಿವರಗಳನ್ನು ಸಭೆಯಲ್ಲಿ ಕೋರಿದರು. | ಪಶುಸಂಗೋಪನಾ ಇಲಾಖೆ /ಹಿರಿಯ ಆರೋಗ್ಯ ಪರಿವೀಕ್ಷಕರು |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಸಿದರು.

**ಕಾರ್ಯದರ್ಶಿಗಳು**

Ashwin Kumar

ಶ್ರೀ.ಅಶ್ವಿನ್‌ಕುಮಾರ್.ಎಮ್.ಎನ್
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:79 ಸರ್ವಜ್ಞನಗರ

**ಅಧ್ಯಕ್ಷರು**

ಡಾ॥ಮಹಮೂದ್ ಅಬ್ಬಾಸ್
ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:79–ಸರ್ವಜ್ಞನಗರ

Scanned with CamScanner